

## ಮಹಿಳೆಯರಿಂದ ಲಾಕ್ ಡೌನ್!

ಬಾಂಗ್ಲಾದ ಢಾಕಾದಲ್ಲಿನ ಗಾರ್ಮೆಂಟ್ಸ್‌ಗಳಲ್ಲಿ ದುಡಿಯುವ ಮಹಿಳೆಯರು ಕಳೆದ ವಾರ ರಸ್ತೆಗಿಳಿದಿದ್ದರು. ಕೊರೊನಾ ರೋಗಾಣು ಸೋಂಕಿಗಿಂತಲೂ ದೈನಿಕದ ಸಂಕಷ್ಟಗಳೇ ಅವರಿಗೆ ಹೆಚ್ಚು ಭೀಕರವೆನ್ನಿದ್ದರಿಂದಾಗಿ, ‘ನಮ್ಮ ಸಂಬಳ ನಮಗೆ ಕೊಡಿಸಿ’ ಎಂದು ಘೋಷಣೆ ಕೂಗುತ್ತ ರಸ್ತೆಗಡ್ಡವಾಗಿ ಕುಳಿತು ವಾಹನ ಸಂಚಾರಕ್ಕೆ ಅಡಚಣೆಯುಂಟು ಮಾಡಿದರು.



## ಉಸಿರು ಸೋಸಕಕ್ಕೆ ಚಿತ್ತಾರ

ಚಿತ್ತಾಪಹಾರಿ ಚಿತ್ತಾರಗಳನ್ನು ಹೊಂದಿರುವ ಮಾಸ್ಕ್‌ಗಳನ್ನು ನೋಡಿದರೆ, ‘ಟೋಪಿ ಬೇಕೆ ಟೋಪಿ, ಎಂಥ ಟೋಪಿ’ ಎನ್ನುವ ಮಕ್ಕಳ ಪದ್ಯ ನೆನಪಿಗೆ ಬಾರದಿರದು. ಬಿಕ್ಕಟ್ಟಿನ ಸಂದರ್ಭದಲ್ಲಿ ಬಳಸುವ ಮಾಸ್ಕ್ ಆದರೇನು, ಅದು ಬೋಳು ಬೋಳಾಗಿರುವುದನ್ನು ಅಲಂಕಾರಪ್ರಿಯರು ಹೇಗೆ ಸಹಿಸಿಯಾರು?

## ಹರಯ ಬಂದ ಸಮಯ...

ಮೆಕ್ಸಿಕೊದ ಈ ಹೆಣ್ಣುಮಗಳಿಗೆ ಹದಿನೈದನೇ ಹುಟ್ಟುಹಬ್ಬದ ಸಂಭ್ರಮ. ತರುಣಿಯೊಬ್ಬಳು ಪ್ರೌಢಾವಸ್ಥೆಗೆ ಪ್ರವೇಶಿಸುವ ಈ ಸಂಕ್ರಮಣ ಸಂದರ್ಭಕ್ಕೆ ಇಂಗ್ಲಿಷ್‌ನಲ್ಲಿ Quinceaera ಎಂದು ಹೆಸರು. ಹರಯದ ಈ ಸಂಭ್ರಮವನ್ನು ಆಚರಿಸದಿದ್ದರೆ ಹೇಗೆ? ಆ ಹುಮ್ಮಸ್ಸಿನಲ್ಲೇ ಲಾಕ್ ಡೌನ್ ನಿರ್ಬಂಧವನ್ನು ಲೆಕ್ಕಿಸದೆ ರಸ್ತೆಗೆ ಬಂದು ಫೋಟೊ ಶೂಟ್ ಮಾಡಿಸಿಕೊಳ್ಳುತ್ತಿದ್ದಾಳೆ.





## ಆನಂದ-ಆತಂಕದ ಜುಗಲಬಂದಿ

ಚೀನಾದಲ್ಲಿ ಕೊರೊನಾ ಸೋಂಕಿನ ಮರುಕಳಿಕೆಯ ಭೀತಿಯ ನಡುವೆಯೂ ಜನಜೀವನ ಸಹಜಗತಿಗೆ ಮರಳುತ್ತಿದೆ. ನವ ವಿವಾಹಿತ ಜೋಡಿಯೊಂದು ಫೋಟೊ ಶೂಟ್ ಸಂಭ್ರಮದಲ್ಲಿ ರಿಫ್ಲೆಕ್ಟರ್ ಬೆಳಕಿಗೆ ತಮ್ಮ ಮುಖಗಳನ್ನೊಡ್ಡಿಕೊಂಡಿದ್ದರೆ, ಫೋಟೊ ತೆಗೆಯುವ ಛಾಯಾಗ್ರಾಹಕರು ಮುಖಗವಸು ಧರಿಸಿದ್ದಾರೆ.